(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಬೆಳಗಿನಿಂದಲೂ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಸರ್ಕಾರದ ಅಭ್ಯಂತರವಿಲ್ಲವೆಂದು ಹೇಳಿದ್ದೇನೆ, ಇದನ್ನು ಮೂರು ಸಲವಲ್ಲ, ಐದು ಸಾರಿ ಹೇಳುತ್ತೇನೆ, ಆದರೆ ಈ ವಿಷಯವನ್ನು ನಿಲುವಳಿ ಸೂಚನೆಯಡಿಯಲ್ಲಿ ತರುವಂಥಾದ್ದಕ್ಕೆ ನಮ್ಮ ವಿರೋಧವಿದೆ. ಇದನ್ನು ಯಾವ ರೂಪದಲ್ಲಿ ಚರ್ಚೆಗೆ ತರಬೇಕೆಂಬುದನ್ನು ತಾವು ನಿರ್ಧಾರ ಮಾಡಬೇಕೇ ಹೊರತು ಇದನ್ನು ತಮ್ಮ ಕೊಠಡಿಯಲ್ಲಿ ಕುಳಿತು ಚರ್ಚೆ ಮಾಡುವಂತಹ ವಿಚಾರ ಏನೂ ಅಲ್ಲ. ಇದಕ್ಕಿಂತ ಹೆಚ್ಚು ನಾನು ಏನು ಹೇಳಲಿ?

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರು ತಮ್ಮ ರೂಮಿಗೆ ಹೋಗುವುದು ಏನೂ ಬೇಡ, ಇಲ್ಲೇ ರೂಲಿಂಗ್ ಕೊಡಿ ಎಂದು ಹೇಳುತ್ತಿದ್ದಾರೆ, ತಾವು ರೂಲಿಂಗ್ ಕೊಡಿ.

Mr. Speaker: I have already rejected the adjournment motion. Shall we take up for discussion on Monday?

ಶ್ರೀ ಡಿ.ಬಿ. ಚಂದ್ರೇಗೌಡ:- ಆಗಬಹುದು.

Mr. Speaker:- Since the government has agreed, we will take up this under Rule 69 on Monday. Now the House is adjourned to meet at 11.00 A.M. on Monday.

- - - - -

(The House adjourned at 2.05 P.M. to meet again on Monday the 15th July 2002, at 11.00 A.M.)

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

ಅನುಬಂಧ - I

ಸೋಮವಾರ ಪೇಟೆ ತಾಲ್ಲೂಕ ಚಕ್ಲಿ ಹೊಳೆ ಜಲಾಶಯದ ಕಾಮಗಾರಿ

114(319) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಚಿಕ್ಲಿಹೊಳೆ ಜಲಾಶಯದ ಯೋಜನೆ ತಯಾರಾಗಿದ್ದು ಯಾವಾಗ, ಇದಕ್ಕಾಗಿ ತೆಗೆದಿರಿಸಿದ ಹಣ ಎಷ್ಟು;

ಅ) ಹಾಲಿ ಈ ಯೋಜನೆ ಅನುಷ್ಠಾನಕ್ಕಾಗಿ ಖರ್ಚು ಮಾಡಿರುವ ಮೊತ್ತವೆಷ್ಟು;

ಇ) ಕಾಮಗಾರಿ ತಡವಾಗುತ್ತಿರುವುದರಿಂದ ಯೋಜನೆಯ ಗಾತ್ರ ಜಾಸ್ತಿಯಾಗುತ್ತಿದೆಯೇ;

ಈ) ಸದರಿ ಜಲಾಶಯಕ್ಕೆ ಇರುವ ಜಾಗವನ್ನು ಬಿಡದೆ ತೊಂದರೆ ಕೊಡುತ್ತಿರುವ ವಿಚಾರ ನಿಜವೆ;

ಉ) ಜಲಾಶಯದ ನಿರ್ಮಾಣದಿಂದ ಸಂತ್ರಸ್ತರಾಗುವವರಿಗೆ ಎಷ್ಟು ಪರಿಹಾರ ಹಣವನ್ನು ಸರ್ಕಾರ ನೀಡಿದೆ;

ಊ) ಇನ್ನೂ ಕಾಮಗಾರಿ ವಿಳಂಬವಾಗಲು ಕಾರಣಗಳೇನು; ಯಾವಾಗ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುತ್ತದೆ (ವಿವರ ನೀಡುವುದು)?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಚಿಕ್ಕಹೊಳೆ ಜಲಾಶಯದ ಯೋಜನೆಯ ಅಂದಾಜು ರೂ. 340.00 ಲಕ್ಷಕ್ಕೆ 1978-79ನೇ ಸಾಲಿನಲ್ಲಿ ಅನುಮೋದನೆ ನೀಡಲಾಗಿದೆ.

ಆ) ಹಾಲಿ ಈ ಯೋಜನೆ ಅನುಷ್ಠಾನಕ್ಕಾಗಿ ಮಾರ್ಚ್ 2002 ರ ಅಂತ್ಯಕ್ಕೆ ಖರ್ಚು ಮಾಡಿರುವ ಮೊತ್ತ ರೂ. 1747.00 ಲಕ್ಷಗಳು.

ಇ) ಈ ಯೋಜನೆಯು 1978-79 ರಲ್ಲಿ ರೂ. 340.00 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಈ ಯೋಜನೆ ಮುಗಿಸುವಲ್ಲಿ ಸಕಾರಣಗಳಿಂದ ತಡವಾಗಿದ್ದು ಈ ಯೋಜನೆಯ ಪರಿಷ್ಕೃತ ಮೊತ್ತ ರೂ. 1800.00 ಲಕ್ಷಗಳಾಗಿರುತ್ತದೆ.

ಈ) ಸದರಿ ಜಲಾಶಯಕ್ಕೆ ಇರುವ ಜಾಗವನ್ನು ಬಿಡದೆ ತೊಂದರೆಯಾಗಿರುವುದಿಲ್ಲ ಆದರೆ ಚಿಕ್ಲೆಹೊಳೆ ಎಡದಂಡೆ ನಾಲೆ 7ನೇ ಮತ್ತು 8ನೇ ಕಿ.ಮೀ.ನಲ್ಲಿ ಒಟ್ಟು 395 ಮೀ.ನಷ್ಟು ಉದ್ದದ ನಾಲೆ ಅಗೆತ ಭೂವಿವಾದದ ಕಾರಣ ಬಾಕಿ ಉಳಿದಿದ್ದು ಇದು ಇತ್ಯರ್ಥವಾಗುವ ಹಂತದಲ್ಲಿ ಇರುತ್ತದೆ. ಜಿಲ್ಲಾಧಿಕಾರಿಗಳು, ಕೊಡಗು ರವರಿಗೆ ವಿವಾದದ ಭೂಮಿಯಲ್ಲಿನ ಬೆಳೆಗೆ ಪರಿಹಾರ ನೀಡಲು ಸೂಕ್ತ ಕ್ರಮ ಕೈಗೊಳ್ಳಲು ದಿ: 25-1-02 ರಲ್ಲಿ ಆದೇಶಿಸಿದೆ.

ಉ) ಜಲಾಶಯದ ನಿರ್ಮಾಣದಿಂದ ಸಂತ್ರಸ್ಥರಾಗಿರುವವರಿಗೆ ಈವರೆಗೆ ರೂ. 128.04 ಲಕ್ಷಗಳ ಪರಿಹಾರ ನೀಡಲಾಗಿದೆ.

ಊ) ಚಿಕ್ಲಿಹೊಳೆ ಯೋಜನೆಯಲ್ಲಿ ಬರತಕ್ಕ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು 7ನೇ ಮತ್ತು 8ನೇ ಕಿ.ಮೀ.ಗಳಲ್ಲಿ ಬರತಕ್ಕ 395 ಮೀ. ಉದ್ದದ ನಾಲೆಯ ಅಗೆತ, ಅಲ್ಲಲ್ಲಿ ಉಳಿದಿರುವ ನಾಲೆಯ ಸಿ.ಸಿ.ಲೈನಿಂಗ್ ಕೆಲಸ ಹಾಗೂ ಸಣ್ಣ ಪುಟ್ಟ ವಿತರಣಾ ನಾಲೆ ಕಾಮಗಾರಿಗಳು ಬಾಕಿ ಉಳಿದಿರುತ್ತವೆ. ಇವುಗಳ ಪೈಕಿ 395 ಮೀ. ಉದ್ದದ ನಾಲೆಯ ಅಗೆತ ಭೂಮಿವಾದದ ಕಾರಣ ಬಾಕಿ ಉಳಿದಿದ್ದು 25-1-02ರ ಸರ್ಕಾರದ ಆದೇಶದಂತೆ ಜಿಲ್ಲಾಧಿಕಾರಿಗಳು, ಮಡಿಕೇರಿ, ಇವರು ವಿವಾದದಲ್ಲಿ ಇರುವ ಭೂಮಿಗೆ ಪರಿಹಾರ ಮೊತ್ತ ನಿಗಧಿ ಮಾಡಬೇಕಾಗಿದ್ದು, ಇತ್ಯರ್ಥವಾಗುವ ಹಂತದಲ್ಲಿರುತ್ತದೆ. ಉಳಿಕೆ ಕಾಮಗಾರಿಗೆ ಬೇಕಾಗಿರುವ ಹಣವನ್ನು ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದ್ದು ಪೂರ್ಣಗೊಳಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.